## 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು

**ಸಿ.ಸಿ. ನಂ.1572-2019**                                    **ಡಿ .ಡಬ್ಲ್ಯು: 2**

| | |
|---|---|
| ಸಾಕ್ಷಿದಾರರ ಹೆಸರು<br>ತಂದೆ/ ಗಂಡನ ಹೆಸರು<br>ವಯಸ್ಸು<br>ಉದ್ಯೋಗ<br>ವಾಸ್ತವ್ಯ | ಪವನ್<br>ಲೇ ಪಿ.ಮಾದಪ್ಪ<br>32 ವರ್ಷ<br>ವ್ಯಾಪಾರ<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ ಮೇರೆಗೆ  ದಿನಾಂಕ 28-10-2024.** |

**ಮುಖ್ಯ ವಿಚಾರಣೆ: ಆರೋಪಿ ಪರ  ಶ್ರೀ ಎಸ್.ಬಿ.ಪಿ ವಕೀಲರಿಂದ:**

ನನಗೆ ಆರೋಪಿ ಮತ್ತು ಪಿರ್ಯಾದಿದಾರರು ಗೊತ್ತು. ಆರೋಪಿ ಪಿರ್ಯಾದಿದಾರರ ಜಮೀನನಲ್ಲಿ ಗುತ್ತಿಗೆಗೆ ವ್ಯವಸಾಯ ಮಾಡುತ್ತಿದ್ದು, ಅಲ್ಲಿ ಬೆಳೆದ ಭತ್ತವನ್ನು ನನಗೆ ಮಾರಾಟ ಮಾಡುತ್ತಿದ್ದರು ಎಂದರೆ ಸರಿ. ನನ್ನ ತಂದೆಯವರು ಲಕ್ಷ್ಮೀ ದೇವಿ ಟ್ರೇಡರ್ಸ್ ಎಂಬ ನಾಮಾಂಕಿತದಲ್ಲಿ ಭತ್ತದ ವ್ಯಾಪಾರವನ್ನು ಮಡುತ್ತಿದ್ದರು. ಸದರಿ ಲಕ್ಷ್ಮೀ ದೇವಿ ಟ್ರೇಡರ್ಸ್ ಸಂಬಂಧಿಸಿದಂತೆ ಖಾತೆ ಕಾರ್ಪೋರೇಶನ್ ಬ್ಯಾಂಕಿನಲ್ಲಿ ಇತ್ತು. ಈಗ ಹಾಲಿ ಕಾರ್ಪೋರೇಶನ್ ಬ್ಯಾಂಕ್ ಯುನಿಯನ್ ಬ್ಯಾಂಕ್ ಅಫ್ ಇಂಡಿಯಾದೊಂದಿಗೆ ವಿಲಿನಗೊಂಡಿರುತ್ತದೆ. ನನ್ನ ತಂದೆಯವರು ಜೀವಂತ ಇದ್ದಾಗ ಯಾರಿಂದಾದರೂ ಭತ್ತ ಖರೀದಿ ಮಾಡಿದರೆ

ಹಣವನ್ನು ತನ್ನ ಕಾರ್ಪೋರೇಶನ್ ಬ್ಯಾಂಕ್ ಖಾತೆಯ ಮುಖೇನವೇ ಹಣವನ್ನು ಪಾವತಿ ಮಾಡುತ್ತಿದ್ದರು. 2018 ರಲ್ಲಿ ಪಿರ್ಯಾದಿದಾರರ ಜಮೀನಿನಲ್ಲಿ ಬೆಳೆದ ಭತ್ತವನ್ನು ಆರೋಪಿ ಮುಖೇನ ನನ್ನ ತಂದೆಯವರು ಖರೀದಿ ಮಾಡಿದ್ದರು. ಆರೋಪಿ ಬೆಳೆದುಕೊಟ್ಟ ಭತ್ತದ ಬಾಬ್ತು ರೂ.1,60,000/- ಗಳ ಹಣವನ್ನು ನನ್ನ ತಂದೆಯವರು ಪಿರ್ಯಾದಿದಾರರಿಗೆ ಚೆಕ್ ಮುಖೇನ ಪಾವತಿ ಮಾಡಿರುತ್ತಾರೆ. ಆರೋಪಿ ಪಿರ್ಯಾದಿದಾರರ ಜಮೀನಿನಲ್ಲಿ ಭತ್ತ ಬೆಳೆದರು ಮಾಲೀಕರು ಪಿರ್ಯಾದಿದಾರರೆಂದು ತಿಳಿಸಿದ್ದರಿಂದ ಆರೋಪಿಯ ಹೇಳಿಕೆ ಮೇರೆಗೆ ಪಿರ್ಯಾದಿದಾರರಿಗೆ ಹಣವನ್ನು ಪಾವತಿ ಮಾಡಿಸಲಾಗಿರುತ್ತದೆ. ಲಕ್ಷ್ಮೀ ದೇವಿ ಟ್ರೇಡರ್ಸ್ ವತಿಯಿಂದ ಪಿರ್ಯಾದಿದಾರರಿಗೆ ದಿ.02-08-2018 ರಂದು ಹಣ ಪಾವತಿ ಆದ ಸಂಬಂಧ ಬ್ಯಾಂಕ್ ಕಾರ್ಪೋರೇಶನ್ ಬ್ಯಾಂಕ್ ಅಕೌಂಟ್ ಸ್ಟೇಟ್ಮೆಂಟ್ ಎಕ್ಸ್ ಟ್ರಾಕ್ಟ್ ಅನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ-9 ಎಂದು ಗುರುತಿಸಲಾಯಿತು. ನನ್ನ ತಂದೆಯವರು ದಿ.13-10-2020 ರಂದು ಮರಣಹೊಂದಿರುತ್ತಾರೆ. ನಾನು ಲಕ್ಷ್ಮೀ ದೇವಿ ಟ್ರೇಡರ್ಸ್ ಗೆ ಸಂಬಂಧಿಸಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಸಿದ್ಧನಿರುತ್ತೇನೆ. 2018 ರಲ್ಲಿ ಪಿರ್ಯಾದಿದಾರರ ಜಮೀನಿನಲ್ಲಿ ಆರೋಪಿ ಬೆಳೆದಿದ್ದ ಭತ್ತದ ಪೂರ್ಣ ಹಣ ಪಿರ್ಯಾದಿದಾರರಿಗೆ ಸಂದಾಯವಾಗಿದ್ದು, ಯಾವುದೇ ಬಾಕಿ ಇರುವುದಿಲ್ಲ.

ಪಿರ್ಯಾದಿದಾರರು 2018 ರಲ್ಲಿ ಆರೋಪಿ ಮಾರಾಟ ಮಾಡಿದ ಭತ್ತವನ್ನು ಹೊರತುಪಡಿಸಿ ಪಿರ್ಯಾದಾರರು ವೈಯಕ್ತಿಕವಾಗಿ ಮಾರಾಟ ಮಾಡಿರುವುದಿಲ್ಲ.

(ಮುಂದುವರಿದ ಮುಖ್ಯ ವಿಚಾರಣೆಗೆ ವಕೀಲರು ಸಮಯಾವಕಾಶವನ್ನು ಕೇಳಿರುವುದರಿಂದ ಸಮಯಾವಕಾಶವನ್ನು ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**